ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

NO. 1, Unnatha Shikshana Soudha, Sheshadri Road, Bangalore - 560 001 Phone: 080 22343904, email: bngcce@kar.nic.in

ಸಂಖ್ಯೆ: DCE/ITS/PUR/15/2020-INFO-DCE
ಕಂಪ್ಯೂಟರ್ ನಂ. 381123

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 22.02.2021

## ಸುತ್ತೋಲೆ

ವಿಷಯ: ಡಿಜಿಟಲ್ ಕಲಿಕೆ ಯೋಜನೆಯಡಿಯಲ್ಲಿ ಐ.ಸಿ.ಟಿ. ಕ್ಲಾಸ್ ರೂಮ್‌ಗಳ ಅನುಸ್ಥಾಪಿಸುತ್ತಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಇಡಿ/135/ಹೆಚ್‌ಪಿಸಿ/2020, ಬೆಂಗಳೂರು, ದಿ: 23.09.2020.
2. Tender No: DCE/2020-21/IND1049 Dated: 01.10.2020
3. ಈ ಕಛೇರಿ ಸರಬರಾಜು ಆದೇಶ ಸಂಖ್ಯೆ: ಡಿಸಿಇ/ಐಟಿಎಸ್/ಪಿಯುಆರ್/10/2020-info-dce Computer No: 335354 dated: 31.12.2020.

****

ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಡಿಜಿಟಲ್ ಕಲಿಕೆ ಯೋಜನೆಯಡಿಯಲ್ಲಿ ಐಸಿಟಿ ಯುಕ್ತ ಕ್ಲಾಸ್ ರೂಂಗಳನ್ನು ಅನುಸ್ಥಾಪಿಸುವ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಪಕರಣಗಳನ್ನು ಸರಬರಾಜು ಮಾಡಲಾಗುತ್ತಿದ್ದು, ಈ ಸಂಬಂಧದಲ್ಲಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡಲಾಗುತ್ತಿದೆ.

1. ಪ್ರಸ್ತುತ 2ನೇ ವರ್ಷದ ಪದವಿ ತರಗತಿಗಳನ್ನು ಐಸಿಟಿ ಕ್ಲಾಸ್‌ರೂಂಗಳನ್ನಾಗಿ ಉನ್ನತೀಕರಿಸುತ್ತಿರುವುದರಿಂದ 2ನೇ ವರ್ಷದ ಎಲ್ಲಾ ತರಗತಿಗಳು ಒಂದೇ ಕಡೆಗೆ/ಸಾಲಿನಲ್ಲಿ ನಡೆಯುವಂತೆ ವ್ಯವಸ್ಥೆ ಮಾಡುವುದು.
2. ಒಂದು ಕ್ಲಾಸ್ ರೂಂಗೆ ಒಂದು ಪ್ರೊಜೆಕ್ಟರ್, ಒಂದು ಆಂಡ್ರೋಯ್ಡ್ ಬಾಕ್ಸ್, ಒಂದು ವೈಟ್ ಬೋರ್ಡ್‌ಗಳನ್ನು ಸರಬರಾಜು ಮಾಡಲಾಗುತ್ತಿದ್ದು, ಪ್ರೊಜೆಕ್ಟರ್ ಮತ್ತು ಆಂಡ್ರೋಯ್ಡ್ ಬಾಕ್ಸ್‌ಗಳನ್ನು Ceiling Mounted Metal Box ಗಳಲ್ಲಿ ಸಂರಕ್ಷಿಸಲು ಹಾಗೂ ಸಮರ್ಪಕ ವೈರಿಂಗ್ ವ್ಯವಸ್ಥೆಯನ್ನು ಸರಬರಾಜು ಸಂಸ್ಥೆಯು ಮಾಡಲಿದೆ.
3. 02 ಕ್ಲಾಸ್‌ರೂಂಗಳಿಗೆ ಸೇರಿದಂತೆ ಒಂದು ಯುಪಿಎಸ್ ಸರಬರಾಜು ಮಾಡಲಾಗುತ್ತಿದೆ.
4. ಪ್ರೊಜೆಕ್ಟರ್‌ಗಳನ್ನು ಅನುಸ್ಥಾಪಿಸುವ ಸಂದರ್ಭದಲ್ಲಿ ಪ್ರೊಜೆಕ್ಟರ್‌ಗಳಿಗೆ ವೈಟ್ ಬೋರ್ಡ್‌ಗಳು ಸಮರ್ಪಕವಾಗಿ ಅಲೈನ್ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಈಗಾಗಲೇ ಗ್ರೀನ್ ಬೋರ್ಡ್‌ಗಳು ಕ್ಲಾಸ್‌ರೂಂಗಳಲ್ಲಿ ಲಭ್ಯವಿದ್ದಲ್ಲಿ ಸರಬರಾಜು ಮಾಡಲಾಗುವ ವೈಟ್ ಬೋರ್ಡ್‌ಗಳನ್ನು ಸದರಿ ಗ್ರೀನ್ ಬೋರ್ಡ್‌ಗಳ ಪಕ್ಕದಲ್ಲಿ ಸ್ಥಾಪಿಸಲಾಗುವುದು.
5. ಎಲ್ಲಾ 2ನೇ ವರ್ಷದ ತರಗತಿಗಳಿಗೆ ವೈಫೈ ಲಭ್ಯವಾಗುವಂತೆ access point ಗಳನ್ನು ಅನುಸ್ಥಾಪಿಸಿಕೊಳ್ಳುವುದು. ಇದಕ್ಕೆ ಅಗತ್ಯವಿರುವ Switch and Secured gateway ಗಳನ್ನು ಸಮೀಪದಲ್ಲಿರುವ ಪ್ರಾಂಶುಪಾಲರ ಕೊಠಡಿ/ಅಧ್ಯಾಪಕರ ಕೊಠಡಿ/ಸುರಕ್ಷಿತ ಕೊಠಡಿಯಲ್ಲಿ ಅನುಸ್ಥಾಪಿಸಿಕೊಳ್ಳುವುದು.
6. ಈಗಾಗಲೇ ಪ್ರೊಜೆಕ್ಟರ್‌ಗಳು ಲಭ್ಯವಿರುವ ಕಾಲೇಜುಗಳಲ್ಲಿ ಅವುಗಳನ್ನು ಪ್ರಸ್ತುತ ಐಸಿಟಿ ಕ್ಲಾಸ್‌ರೂಂಗಳಾಗಿ ಪರಿವರ್ತಿಸಲಾಗುತ್ತಿರುವ ತರಗತಿಗಳಿಗೆ Shift ಮಾಡಿ ಸ್ಥಾಪಿಸಿಕೊಳ್ಳತಕ್ಕದ್ದು. ಸದರಿ ಕಾಲೇಜುಗಳಿಗೂ ಕೂಡ ವೈಟ್‌ಬೋರ್ಡ್, ಆಂಡ್ರೋಯ್ಡ್ ಬಾಕ್ಸ್ ಮತ್ತು ಯುಪಿಎಸ್‌ಗಳನ್ನು ಸರಬರಾಜು ಮಾಡಲಾಗುತ್ತಿದೆ. ಪ್ರೊಜೆಕ್ಟರ್‌ಗಳು

ಲಭ್ಯವಿರುವ ಕಾಲೇಜುಗಳಲ್ಲಿ ಅವುಗಳನ್ನು ಆಂಡ್ರೋಯ್ಡ್ ಬಾಕ್ಸ್‌ಗಳೊಂದಿಗೆ ಡಿಜಿಟಲ್ ಕಲಿಕೆಗೆ ಗುರುತಿಸಲಾಗಿರುವ ತರಗತಿಗಳಲ್ಲಿ Ceiling Mount ಮಾಡಿಸಿಕೊಳ್ಳತಕ್ಕದ್ದು. ಸದರಿ ತರಗತಿಗಳಲ್ಲಿ ಈಗಾಗಲೇ ಪ್ರೊಜೆಕ್ಟರ್ ಸ್ಕ್ರೀನ್‌ಗಳು/ಯುಪಿಎಸ್ ವ್ಯವಸ್ಥೆ ಲಭ್ಯವಿದ್ದಲ್ಲಿ ಅವುಗಳನ್ನು ಕಾಲೇಜಿನಲ್ಲಿ ಇತರ ಕಡೆಗಳಲ್ಲಿ ಮರುಬಳಸಿಕೊಳ್ಳುವಂತೆ ತಿಳಿಸಿದೆ.

7. ಸರಬರಾಜುದಾರ ಸಂಸ್ಥೆ ಉಪಕರಣಗಳ ಅನುಸ್ಥಾಪನೆಗೆ ಬಂದ ಸಮಯದಲ್ಲಿಯೇ ಪ್ರಾಂಶುಪಾಲರು ಮತ್ತು ಐಟಿ ಕೋ-ಆರ್ಡಿನೇಟರ್‌ಗಳು ಖುದ್ದಾಗಿ ಹಾಜರಿದ್ದು, ಮೇಲುಸ್ತುವಾರಿಯನ್ನು ವಹಿಸಿಕೊಂಡು ಅನುಸ್ಥಾಪನಾ ಕಾರ್ಯಗಳನ್ನು ಸಮರ್ಪಕವಾಗಿ ಪೂರ್ಣಗೊಳಿಸಿಕೊಳ್ಳತಕ್ಕದ್ದು. ಅನುಸ್ಥಾಪನಾ ಕಾರ್ಯಗಳು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದಿದ್ದಲ್ಲಿ ಅದಕ್ಕೆ ಪ್ರಾಂಶುಪಾಲರುಗಳೇ ನೇರ ಹೊಣೆಯಾಗಿರುತ್ತಾರೆ. ಸರಬರಾಜುದಾರ ಸಂಸ್ಥೆಯಿಂದ ಪ್ರತಿನಿಧಿಗಳು ತೆರಳಿದ ಸಮಯದಲ್ಲಿ ಅನುಸ್ಥಾಪನೆ ಕಾರ್ಯ ಕೈಗೊಳ್ಳಲು ತೊಂದರೆಪಡಿಸಿದಲ್ಲಿ/ವಿಳಂಬಗೊಳಿಸಿದಲ್ಲಿ ಕೂಡಾ ಪ್ರಾಂಶುಪಾಲರನ್ನು ಇದಕ್ಕೆ ಜವಾಬ್ದಾರರನ್ನಾಗಿ ಪರಿಗಣಿಸಲಾಗುವುದು.

೮. Installation Report ಗಳ ನಮೂನೆಗಳನ್ನು ಎಲ್ಲಾ ಪ್ರಾಂಶುಪಾಲರುಗಳಿಗೆ ಇ-ಮೇಲ್ ಮೂಲಕ ರವಾನಿಸಲಾಗುತ್ತಿದ್ದು, ಅನುಸ್ಥಾಪನೆ ಕಾರ್ಯ ಪೂರ್ಣಗೊಂಡ ನಂತರದಲ್ಲಿ ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ಭರ್ತಿ ಮಾಡಿದ ನಮೂನೆಗಳನ್ನು ಪ್ರಾಂಶುಪಾಲರ ಧೃಢೀಕರಣದೊಂದಿಗೆ ಮೂಲಪ್ರತಿಯನ್ನು ಸಂಸ್ಥೆಗೆ ನೀಡಿ ಪ್ರತಿಯನ್ನು ಕಾಲೇಜಿನಲ್ಲಿ ಸಂರಕ್ಷಿಸಿಟ್ಟುಕೊಳ್ಳತಕ್ಕದ್ದು ಹಾಗೂ ಅನುಸ್ಥಾಪಿಸಲಾದ ಉಪಕರಣಗಳನ್ನು ದಸ್ತಾನು ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

೯. ನೆಟ್‌ವರ್ಕಿಂಗ್ ವ್ಯವಸ್ಥೆಯ ನೀಲನಕ್ಷೆಯನ್ನು ಸರಬರಾಜುದಾರ ಸಂಸ್ಥೆಯಿಂದ ಪಡೆದುಕೊಂಡು ಸಂರಕ್ಷಿಸಿಟ್ಟುಕೊಳ್ಳತಕ್ಕದ್ದು.

೧೦. ಅತ್ಯಗತ್ಯವಾಗಿರುವ ಇಂಟರ್‌ನೆಟ್ ವ್ಯವಸ್ಥೆಯನ್ನು ಪ್ರಾಂಶುಪಾಲರು ತುರ್ತಾಗಿ ಮಾಡಿಕೊಳ್ಳತಕ್ಕದ್ದು.

**ಲಗತ್ತು:** ಖರೀದಿ ಆದೇಶದ ಪ್ರತಿ, ತಾಂತ್ರಿಕ ವೈಶಿಷ್ಟಗಳ ಪಟ್ಟಿ ಕಾಲೇಜುಗಳಲ್ಲಿ ಅನುಸ್ಥಾಪಿಸಲಾಗುವ ಐಸಿಟಿ ಉಪಕರಣಗಳ ಕಾಲೇಜುವಾರು ವಿವರ

ನಿರ್ದೇಶಕರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ